# ಶ್ರೀ ವಿಜಯದಾಸರ ನುಡಿಮುತ್ತು

ಭಗವಂತನಾದ ಶ್ರೀಕೃಷ್ಣ ಗೀತೆಯಲ್ಲಿ ತಿಳಿಸಿಕೊಟ್ಟಂತೆ ವಿಜಯದಾಸರು ಸಂಸಾರವೆಂಬ ಸಾಗರದಲ್ಲಿ ಮುಳುಗಿದ್ದ ಸಜ್ಜೀವನು ಹೇಗೆ ಅದರಿಂದ ದಾಟಿ ಬರಬೇಕೆಂದು ರಹಸ್ಯವನ್ನು ಬಿಚ್ಚಿಟ್ಟಿರುವರು. ಶಾಸ್ತ್ರವಿಷಯವನ್ನು ಅತಿ ಸುಲಭಶೈಲಿಯ ಸರಳ ಭಾಷೆಯಲ್ಲಿ ತಿಳಿಹೇಳುವರು. 'ಸಂಸಾರವೆಂಬ ಸೌಭಾಗ್ಯವಿರಲಿ' ಎಂದು ಹೇಳಿದ ದಾಸರ ಹಾರ್ದವನ್ನು ತಿಳಿಸಿ 'ಇದ್ದು ಇರದಿರಬೇಕು' ಎಂಬ ರಹಸ್ಯವನ್ನು ಭೇದಿಸಿರುವರು. ಸಂಸಾರದಲ್ಲಿ ಇದ್ದು ಜೈಸಬೇಕಾದ ಉಪಾಯವನ್ನು ತೋರಿಸಿಕೊಟ್ಟರು. ಅವರ ಮಾತುಗಳನ್ನೇ ಕೇಳಿ,

ಅಂಗಳದೊಳು ಪಕ್ಕಿ ಕುಳಿತು ಹಾರಿದಂತೆ<br>
ಅಂಗಡಿ ನರಹಿ ತಿರುಗಿ ಜನ ಪೋದಂತೆ<br>
ಮುಂಗುಡಿಮಕ್ಕಳು ಮನೆಗಟ್ಟಿ ಕೆಡೆಸಿದಂತೆ<br>
ಹಿಂಗದರವಂಟಿಗೆಯ ಮಂದಿ ಸಾಗಿದಂತೆ<br>
ಸಂಗಾತದವರು ತನ್ನ ಕೂಡಲಿದ್ದರು ಅವರ<br>
ಹಂಗಿಗನಾಗದೆ ಅದರಂತೆ ಗುಣಸೋದು<br>
ಮುಂಗಾರಿ ಮಿಂಚಿನಂದದಿ ದೇಶದೊಳಗೆ ನಿ-<br>
ಸ್ಸಂಗನಾಗಿ ತಿರುಗಿ ಕಾಲಕಳೆಯಬೇಕು<br>
ಬಂಗಾರ ಮೊದಲಾದ ದ್ರವ್ಯಗಳ ಕಂಡರೆ<br>
ಮುಂಗಾಲಲಿ ಒದೆದು ದಾಟಿ ಪೋಗುವುದಯ್ಯ<br>
ಹಂಗಿಗನಾಗದಿರು ಪರರ ಪಾಶಕ್ಕೆ ಶಿಲ್ಕಿ<br>
ಭಂಗವಾದರು ಲೇಶಖೇದ ಪಡದಿರು<br>
ಮಂಗಳಮೂರುತಿ ವಿಜಯವಿಠಲರೇಯನ<br>
ಸಂಗೀತದಲಿ ಬಾಳಿ ಹರಿದಾಸರ ಪಾದಕೆ ಬೀಳೋ ॥

ವಿಜಯದಾಸರ ಮೇಲಿನ ಒಂದೊಂದು ಮಾತುಗಳು ಮನುಷ್ಯನ ಜೀವನವನ್ನೇ ಬದಲಿಸುವ ಅಂಶಗಳು. ಸತ್ಯಾಂಶಗಳ ಅರಿವಿನಿಂದ ಮಾತ್ರ ಮನುಷ್ಯ ತನ್ನ ಜೀವನವನ್ನು ರೂಪಿಸಿಕೊಳ್ಳಬಲ್ಲ. ಈ ಭೂಮಿಗೆ ಬಂದು ಇದ್ದು ನಡೆದು ಬಾಳಿ ಏನನ್ನು ಸಾಧಿಸಿದೆವೆಂದು ಆಗಾಗ ಚಿಂತಿಸುವುದೇ ಜೀವನದ ನಿಶ್ಚಿಂತೆಗೆ ಕಾರಣ. ಇವು ವಿಜಯದಾಸರ ಅನುಭವದ ಫಲಗಳು. ಅರ್ಥಗರ್ಭಿತ ರತ್ನಗಳು. ಜೀವನದ ಉನ್ನತಿಗೆ ಸೋಪಾನಗಳು. ಈ ಮಾತುಗಳನ್ನು ಮತ್ತೆ ಮತ್ತೆ ಮೆಲುಕು ಹಾಕಬೇಕು. ಇಲ್ಲಿಯ ಉಪಮಾನಗಳನ್ನು ಪರಾಮರ್ಶಿಸಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ನಿಜಾರ್ಥದಲ್ಲಿ ಶ್ರೀ ದಾಸರ ಹಾರ್ದವು ಹೃದಯಂಗಮವಾಗುವುದರಲ್ಲಿ ಸಂಶಯವಿಲ್ಲ.